ದಿಃ21.03.2023 O S No.70/2017 PW-1

ದಿಃ21.03.2023 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ ಜಿ ವಕೀಲರಿಂದ

ನಿಮ್ಮ ತಾತನ ದಾವಾ ಷೆಡ್ಯೂಲ್ ಸ್ವತ್ತನ್ನು ಅನಿಲ್ ಕುಮಾರ್ ಮತ್ತು ಸಬಲಯ್ಯ ಅವರಿಂದ ಖರೀದಿ ಮಾಡಿದ್ದು ಎಂದರೆ ಸರಿ. ಸದರಿ ಸ್ವತ್ತಿನ ಮೇಲೆಯೇ ನಾನು ಪ್ರಸ್ತುತ ದಾವೆಯನ್ನು ಸಲ್ಲಿಸಿರುವುದು ಎಂದರೆ ಸರಿ. ನಿಮ್ಮ ತಾತ ಬದುಕಿದಂತಹ ಕಾಲದಲ್ಲಿ 4ನೇ ಪ್ರತಿವಾದಿಯ ಹೆಸರಿಗೆ ವಿಲ್ ನಾಮ ಮಾಡಿದ್ದರು ಎಂದರೆ ಸರಿ. ನಮ್ಮ ತಾತ ಈಗ ಮರಣ ಹೊಂದಿದ್ದಾರೆ. ಅವರ ಮರಣಾನಂತರ 4ನೇ ಪ್ರತಿವಾದಿ ದಾವಾ ಷೆಡ್ಯೂಲ್ ಸ್ವತ್ತನ್ನು ತಮ್ಮ ಹೆಸರಿಗೆ ಖಾತೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ನಿಮ್ಮ ತಾತನವರು 4ನೇ ಪ್ರತಿವಾದಿಯ ಪರವಾಗಿ ತಾನು ಖರೀದಿ ಮಾಡಿದ ಸ್ವತ್ತನ್ನು ವಿಲ್ ಬರೆದುಕೊಟ್ಟಿದ್ದಾರೆಯೇ ಹೊರತು ಯಾವುದೇ ಪಿತ್ರಾರ್ಜಿತ ಸ್ವತ್ತನ್ನು ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿ ದಾವಾ ಷೆಡ್ಯೂಲ್ ಸ್ವತ್ತು ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ಯಾವುದಾದರೂ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಪಿತ್ರಾರ್ಜಿತವಾಗಿ ಸ್ವತ್ತುಗಳು ದಿ.22.02.1992 ರಲ್ಲಿಯೇ ಕುಟುಂಬದ ಸದಸ್ಯರ ನಡುವೆ ವಿಭಾಗವಾಗಿದೆ ಎಂದರೆ ಸಾಕ್ಷಿ ಜಂಟಿ ಖಾತೆಯಲ್ಲಿಯೇ ಇರುವುದು ಎಂದು ನುಡಿಯುತ್ತಾರೆ. ಈಗಲೂ ಸಹ ಜಂಟಿ ಖಾತೆಯಲ್ಲಿಯೇ ಇದೆ ಎಂದು ತೋರಿಸಲು ಯಾವುದಾದರೂ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 3/3 ರಲ್ಲಿ ಮನೆ ಕಟ್ಟಿಕೊಳ್ಳುವ ಉದ್ದೇಶಕ್ಕಾಗಿ 70 ಇಂಟು 30 ಅಡಿ ನೀಡಿದ್ದಾರೆ ಎಂದರೆ ಸರಿ. ಅದೇ ರೀತಿ ಸರ್ವೆ ನಂಬ್‌ರ್ 3/1 ರಲ್ಲಿಯೂ ಸಹ 5 1/2 ಗುಂಟೆ ನೀಡಿದ್ದಾರೆ ಎಂದರೆ ಅದು ಜಂಟಿ ಖಾತೆಯಲ್ಲಿ ಇದೆ ಎಂದು ನುಡಿಯುತ್ತಾರೆ. ನಿಮ್ಮ ಚಿಕ್ಕಪ್ಪನಾದ ಮಲವಯ್ಯ ನವರಿಗೂ ಸಹ 3/3 ರಲ್ಲಿ ಮನೆ ಕಟ್ಟಿಕೊಳ್ಳುವ ಉದ್ದೇಶಕ್ಕಾಗಿ 70 ಇಂಟು 30 ಅಡಿ, ಸರ್ವೆ ನಂಬ್‌ರ್ 3/1

ರಲ್ಲಿಯೂ ಸಹ 5 1/2 ಗುಂಟೆ ನೀಡಿದ್ದಾರೆ ಎಂದರೆ ಸರಿ. ಮುಂದುವರೆದು ಜಂಟಿ ಖಾತೆಯಲ್ಲಿ ಇದೆ ಎಂದು ನುಡಿಯುತ್ತಾರೆ. ಸದರಿಯವರು 2ನೇ ವಾದಿಯ ತಂದೆ ಎಂದರೆ ಸರಿ. 4ನೇ ಪ್ರತಿವಾದಿಗೂ ಸಹ ಸರ್ವೆ ನಂಬರ್ 3/3 ರಲ್ಲಿ ಮನೆ ಕಟ್ಟಿಕೊಳ್ಳುವ ಉದ್ದೇಶಕ್ಕಾಗಿ 70 ಇಂಟು 30 ಅಡಿ ನೀಡಿದ್ದಾರೆ ಎಂದರೆ ಸರಿ. ಅದೇ ರೀತಿ ಸರ್ವೆ ನಂಬರ್ 3/1 ರಲ್ಲಿಯೂ ಸಹ 5 1/2 ಗುಂಟೆ ನೀಡಿದ್ದಾರೆ ಎಂದರೆ ಸಾಕ್ಷಿ ಅವರಿಗೂ ಹೆಚ್ಚಾಗಿ ನೀಡಿದ್ದಾರೆ ಎಂದು ನುಡಿಯುತ್ತಾರೆ. 4ನೇ ಪ್ರತಿವಾದಿಗೂ ಸಹ ಸಮವಾಗಿ ಭಾಗ ನೀಡಿದ್ದಾರೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿ ಮೇಲೆ ಹೇಳಿದ ಸ್ವತ್ತುಗಳನ್ನು ಸೇರಿಸಿಲ್ಲ ಎಂದರೆ ಸರಿ. ಉದ್ದೇಶಪುರ್ವಕವಾಗಿ ನಮಗೆ ಬಂದಂತಹ ಪಿತ್ರಾರ್ಜಿತ ಸ್ವತ್ತುಗಳನ್ನು ಹೊರತು ಪಡಿಸಿ ನಿಮ್ಮ ತಾತನವರ ಸ್ವಯಾರ್ಜಿತ ಸ್ವತ್ತನ್ನು ವಿಲ್ ಮೂಲಕ ಬರೆದುಕೊಟ್ಟ ಸ್ವತ್ತಿಗಳ ಮೇಲೆ ಮಾತ್ರ ದಾವೆ ಸಲ್ಲಿಸಿ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆ ನಿಮ್ಮ ಕುಟುಂಬಸ್ಥರು ಎಲ್ಲಾರೂ ಸೇರಿ 4ನೇ ಪ್ರತಿವಾದಿ ಮತ್ತು 2ನೇ ವಾದಿಯ ತಾಯಿಯ ಮಂಜುಳ ಇವರ ವಿರುದ್ದ ವಿಭಾಗಕ್ಕಾಗಿ ದಾವೆ ಸಲ್ಲಿಸಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯ ಬಗ್ಗೆ ಗೊತ್ತಿದ್ದು ಅದು ವಜಾ ಅಗಿರುವ ಕಾರಣ ಪ್ರಸ್ತುತ ದಾವೆಯನ್ನು ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. ದುರುಲಾಭ ಪಡೆಯುವ ಉದ್ದೇಶದಿಂದ ಪ್ರಸ್ತುತ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಓ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.